ಆರ್ ಎ ನಂ. 36/2023

ಪಿ ಡಬ್ಲ್ಯು 1

ದಿನಾಂಕ 16/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಎದುರುದಾರರ ಪರಃ ಶ್ರೀ ಬಿ ಆರ್ ವಕೀಲರಿಂದಃ</u>

ಪ್ರಸ್ತುತ ಮೇಲ್ಮನವಿಯನ್ನು ಯಾರು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನಾನೇ ಎಂದು ನುಡಿಯುತ್ತಾರೆ. ವಿಚಾರಣಾ ನ್ಯಾಯಾಲಯದಲ್ಲಿ ಪ್ರತಿ ಮುದ್ದತ್ತಿನಂದು ನಾನು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ವಿಚಾರಣಾ ನ್ಯಾಯಾಲಯದಲ್ಲಿ ನನ್ನ ಗಂಡ ಹಾಜರಾಗುತ್ತಿದ್ದರು, ಅವರು ಮೃತ ಪಟ್ಟ ನಂತರದಲ್ಲಿ ನಾನು ಹಾಜರಾಗುತ್ತಿದ್ದೆ ಎಂದು ನುಡಿಯುತ್ತಾರೆ. ವಿಚಾರಣಾ ನ್ಯಾಯಾಲಯದಲ್ಲಿ ತೀರ್ಪಾದ ದಿನ ನಾನು ನ್ಯಾಯಾಲಯದಲ್ಲಿ ಹಾಜರಿದ್ದೆ ಎಂದರೆ ಸರಿ. ನನ್ನ ವಕೀಲರು ಸಹ ಆ ದಿನ ಹಾಜರಿದ್ದರು ಎಂದರೆ ಸರಿ. ಪ್ರಸ್ತುತ ಮೇಲ್ಮನವಿಯನ್ನು ನಾನು ಯಾರ ಯಾರ ವಿರುದ್ದ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ಸ್ವಾಮೀಜಿಗಳ ವಿರುದ್ದ ಎಂದು ನುಡಿಯುತ್ತಾರೆ. ಅವರ ಒಬ್ಬರ ವಿರುದ್ದ ಮಾತ್ರ ಮೇಲ್ಮನವಿ ಸಲ್ಲಿಸಲಾಗಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವಿಚಾರಣಾ ನ್ಯಾಯಾಲಯದಲ್ಲಿ ನನ್ನ ಪರವಾಗಿ ಯಾವ ವಕೀಲರು ಪ್ರಕರಣ ನಡೆಸಿದ್ದರು ಎಂದರೆ ಸಾಕ್ಷಿ ತುಮಕೂರಿನ ವಕೀಲರು ಎಂದು ನುಡಿಯುತ್ತಾರೆ. ಪ್ರಸ್ತುತ ಮೇಲ್ಮನವಿಯಲ್ಲೂ ಸಹ ಅದೇ ವಕೀಲರು ಹಾಜರಾಗುತ್ತಿದ್ದಾರೆ ಎಂದರೆ ಸರಿ. ವಿಚಾರಣಾ ನ್ಯಾಯಾಲಯದಲ್ಲಿ ತೀರ್ಪಿನ ದಿನ ನಾನು

ಹಾಜರಿದ್ದ ಕಾರಣ ತಕ್ಷಣ ನಾನು ಪ್ರತಿಯನ್ನು ಪಡೆಯಲು ಅರ್ಜಿ ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ತಿಳುವಳಿಕೆ ಇರಲಿಲ್ಲ ಎಂದು ನುಡಿಯುತ್ತಾರೆ. ತೀರ್ಪು ಆದ ಎಷ್ಟು ದಿನಗಳ ನಂತರ ತೀರ್ಪಿನ ಪ್ರತಿ ಪಡೆಯಲು ಅರ್ಜಿ ಸಲ್ಲಿಸಲಾಯಿತು ಎಂದರೆ ಸಾಕ್ಷಿ 4 ತಿಂಗಳ ನಂತರ ಎಂದು ನುಡಿಯುತ್ತಾರೆ. ತೀರ್ಪಾದ 4 ತಿಂಗಳಲ್ಲಿ ನಾನು ನನ್ನ ವಕೀಲರನ್ನು ಭೇಟಿ ಮಾಡಿಲ್ಲ, 4 ತಿಂಗಳ ನಂತರ ಬೇಟಿ ಮಾಡಿರುತ್ತೇನೆ. ಆ ರೀತಿ 4 ತಿಂಗಳ ನಂತರದಲ್ಲಿ ತೀರ್ಪಿನ ಪ್ರತಿ ಪಡೆಯಲು ಅರ್ಜಿ ಸಲ್ಲಿಸಿದಾಗ ಎಷ್ಟು ದಿನಗಳಲ್ಲಿ ಪ್ರತಿ ದೊರೆತಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ ಎಂದು ನುಡಿಯುತ್ತಾರೆ. ತೀರ್ಪಿನ ಪ್ರತಿಯನ್ನು ನಾನೇ ಸ್ವತಃ ಪಡೆದಿರುತ್ತೇನಾ ಎಂದರೆ ಸಾಕ್ಷಿ ನಾನು ನನ್ನ ವಕೀಲರ ಮೂಲಕ ತೀರ್ಪಿನ ಪ್ರತಿ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ತೀರ್ಪಿನ ಪ್ರತಿ ಪಡೆದ ದಿನವೇ ವಕೀಲರಿಗೆ ಪ್ರತಿ ನೀಡಿರುತ್ತೇನಾ ಎಂದರೆ ಸಾಕ್ಷಿ ತೀರ್ಪಿನ ಪ್ರತಿಯನ್ನು ನನ್ನ ವಕೀಲರ ಮೂಲಕ ಪಡೆದು ಆನಂತರ ನ್ಯಾಯಾಲಯಕ್ಕೆ ಸದರಿ ಪ್ರತಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಮೇಲ್ಮನವಿಯನ್ನು ಯಾವ ಕಾರಣಕ್ಕೆ ಕಾಲವಿಳಂಬ ಮಾಡಿ ಸಲ್ಲಿಸಲಾಗಿದೆ ಎಂದರೆ ಸಾಕ್ಷಿ ನನಗೆ ತಿಳುವಳಿಕೆ ಇರಲಿಲ್ಲ, ಅನಾರೋಗ್ಯ ಸಮಸ್ಯೆ ಸಹ ಇತ್ತು ಎಂದು ನುಡಿಯುತ್ತಾರೆ. ನನಗೆ ಅನಾರೋಗ್ಯ ಸಮಸ್ಯೆ ಇದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

ನನಗೆ ಸುಮಾರು 15-20 ದಿನಗಳ ಕಾಲ ಅನಾರೋಗ್ಯ ಸಮಸ್ಯೆ ಇದ್ದು, ನನಗೆ ಕೈಕಾಲು ನೋವು ಇದ್ದು, ಒಳರೋಗಿಯಾಗಿ ದಾಖಲಾಗದೆ ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸುಮಾರು 5-6 ಬಾರಿ ಚಿಕಿತ್ಸೆ ಪಡೆದಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿ ಚಿಕಿತ್ಸೆ ಪಡೆದ ಬಗ್ಗೆ ವೈದ್ಯಕೀಯ ಸಲಹಾ ಚೀಟಿಗಳು ನನ್ನ ಬಳಿ ಲಭ್ಯ ಇದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಆ ರೀತಿ ಮಾಹಿತಿ ನೀಡುವಾಗ ನನಗೆ ಕೈಕಾಲು ನೋವು ಇದ್ದು ನಾನು ಸುಮಾರು 5-6 ಬಾರಿ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ತಿಳಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಕಾರಣದಿಂದಲೇ ವಿಳಂಬವಾಗಿದೆ ಎಂದು ನನ್ನ ವಕೀಲರಿಗೆ ತಿಳಿಸಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಎಷ್ಟು ದಿನ ತಡವಾಗಿದೆ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿ ಸುಮಾರು 4 ತಿಂಗಳಿಗಿಂತಲೂ ಹೆಚ್ಚು ಎಂದು ನುಡಿಯುತ್ತಾರೆ. ವಿಚಾರಣಾ ನ್ಯಾಯಾಲಯದ ತೀರ್ಪಾದ ನಂತರ ನನಗೆ ಅನಾರೋಗ್ಯ ಸಮಸ್ಯೆ ಇದ್ದ ಕಾರಣದಿಂದಲೇ ಸಕಾಲದಲ್ಲಿ ಮೇಲ್ಮನವಿ ಸಲ್ಲಿಸಲು ಆಗಿರುವುದಿಲ್ಲ ಎಂಬ ವಿಚಾರವನ್ನು ನನ್ನ ಮುಖ್ಯ ವಿಚಾರಣಾ

ಪ್ರಮಾಣ ಪತ್ರದಲ್ಲಿ ಹೇಳಿ ಬರೆಸದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲ್ಮನವಿಯನ್ನು ವಿಳಂಬವಾಗಿ ಸಲ್ಲಿಸಲು ಯಾವುದೇ ಸಕಾರಣ ಇಲ್ಲದೆ ಇರುವ ಕಾರಣದಿಂದಲೇ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಎಂದು ವಿಚಾರ ನನ್ನ ಸಾಕ್ಷ್ಯದಲ್ಲಿ ಒಂದು ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಗ್ಯವಾಗಿದ್ದರೂ ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಕಾರಣವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದಲೇ ಯಾವುದೇ ಸಕಾರಣ ಇಲ್ಲದೆ ನಾನು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೇಲ್ಮನವಿಯನ್ನು ವಿಳಂಬವಾಗಿ ಸಲ್ಲಿಸಲು ಯಾವುದೇ ಸಕಾರಣ ಮತ್ತು ದಾಖಲೆ ಇಲ್ಲದೆ ಇರುವುದರಿಂದ ನನಗೆ ಪ್ರಸ್ತುತ ಅರ್ಜಿಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.